ಅವನಿಗೆ ದೇವಿಯ 'ಕರ್ಣಾಭರಣ' ಎಂದು ಹೆಸರಿತ್ತು. ಒಮ್ಮೆ ಆತ ವಿಜಯನಗರದ ದೊರೆ ತಿರುಮಲ ನಾಯಕನನ್ನು ನವರಾತ್ರಿಯ ಉತ್ಸವಕ್ಕೆಂದು ಆಹ್ವಾನಿಸಿ ಉಪಾಯದಿಂದ ಹಿಡಿದುಹಾಕಿ, ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಸ್ವತಂತ್ರ ದೊರೆತನ ಘೋಷಣೆ ಮಾಡಿಕೊಳ್ಳುತ್ತಾನೆ. ಈ ವಿಜಯದ ಸಂಕೇತವಾಗಿ ವಿಜಯನಗರದ ಮಾದರಿಯಲ್ಲೇ ನವರಾತ್ರಿ ಉತ್ಸವ ಆರಂಭಿಸುತ್ತಾನೆ. ಅದುವೆ ಇಂದು ಜನಪ್ರಿಯವಾಗಿ ಆಚರಣೆಗೊಳ್ಳುವ 'ಮೈಸೂರು ದಸರಾ'. ಈ ಉತ್ಸವವು ವಾಸ್ತವವಾಗಿ ಸೈನಿಕಶಕ್ತಿ ಪ್ರದರ್ಶನ ಮಾಡುವ ಮಿಲಿಟರಿ ಕಾರ್ಯಕ್ರಮವೂ ಆಗಿತ್ತು. ಹೀಗೆ ಒಡೆಯರು ವಿಜಯದಶಮಿಯನ್ನು ತಮ್ಮನ್ನು ಆಳುತ್ತಿದ್ದ ವಿಜಯನಗರದಿಂದ ಪಡೆಯುತ್ತಾರೆ. ಆದರೆ ವಿಜಯನಗರದ ಅರಸರನ್ನು ಸೋಲಿಸಿ ಸ್ವತಂತ್ರ ಅರಸರಾದ ನಂತರ ವಿಜಯದಶಮಿಯನ್ನು ಆಚರಿಸುತ್ತಾರೆ.

ವಿಜಯದಶಮಿ ಹೆಸರನ್ನು ನೋಡಿದರೆ ಶಾಕ್ತ ದೇವಿಯರ ವಿಜಯದ ಕಥೆಗಳಿಗೂ ಒಂದು ಸಂಬಂಧವಿದ್ದಂತೆ ಕಾಣುತ್ತದೆ. ದೇವಿಯರು ಸಿದ್ಧರನ್ನು ಸೋಲಿಸಿದ ಕಥೆಗಳು ನಮ್ಮಲ್ಲಿವೆ. ಗಾಂಜಾ ನಶೆ ಏರಿದ ಸಿದ್ಧರನ್ನು ಯಲ್ಲಮ್ಮ ತುಳಿಯುತ್ತಾಳೆ. ಸೋತ ಗಂಡಸರು ಹೆಣ್ಣುಡುಗೆ ಉಡುವುದನ್ನು ಯಲ್ಲಮ್ಮನ ಪರಂಪರೆಯಲ್ಲಿ ನಾವು ಕಾಣಬಹುದು. ಯುದ್ಧದಲ್ಲಿ 'ವಿಜಯವು ಸಿಗಲಿ' ಎಂದು ಬನ್ನಿ ಮರವನ್ನು ಆರಾಧಿಸುವುದು, ಅಥವಾ ಯುದ್ಧದಲ್ಲಿ ಪಡೆದ ವಿಜಯದ ಸಂಕೇತವಾಗಿ ಕಾಳಿಯನ್ನು ಆರಾಧಿಸುವುದು ಇವೆಲ್ಲಾ ಹಲವು ಬಗೆಯ 'ವಿಜಯ'ದ ಗೆಲುವಿನ ಕಥೆಗಳನ್ನು ಹಿನ್ನೆಲೆಯನ್ನಾಗಿಸಿಕೊಂಡಿವೆ. ಹೀಗಿರುವಾಗ ವಿಜಯ ಎಂದರೆ ಕೇವಲ ಗಂಡಿನ ವಿಜಯ ಮಾತ್ರವಲ್ಲ, ಗಂಡಿನ ವಿರುದ್ಧದ ಹೆಣ್ಣಿನ ಗೆಲುವುಗಳನ್ನೂ ವಿಜಯದಶಮಿ ಸಾಂಕೇತಿಸುತ್ತಿದೆ. ದುರ್ಗೆ ಮತ್ತು ಮಹಿಷಾಸುರ ಮರ್ಧಿನಿಯರು ದೇವಲೋಕವನ್ನು ಕಾಯಲು ರಕ್ಕಸರನ್ನು ಕೊಲ್ಲುವ ಕಥನಗಳನ್ನು ಇದಕ್ಕೆ ಜೋಡಿಸಬಹುದು. ಜನಪದ ಚಾಮುಂಡಿ ಮಹಿಷಾಸುರನ ಸಂಹಾರ ಮಾಡುವ ಕಥೆ ಕೂಡ ಈ ಹಿನ್ನೆಲೆಯಲ್ಲಿ ಹುಟ್ಟಿರಬೇಕು.

## ಸಮುದಾಯಗಳಲ್ಲಿ ಬಹುರೂಪ

ಕರ್ನಾಟಕದಲ್ಲಿ ನೆಲೆಸಿದ ವಿವಿಧ ಬುಡಕಟ್ಟು, ಆದಿವಾಸಿ, ಅಲೆಮಾರಿ, ಇತರೆ ಜನ ಸಮುದಾಯಗಳು ದಸರಾವನ್ನು ತಮ್ಮದೇ ಕುಲಮೂಲಗಳ ನೆಲೆಗಳಿಂದ ಆಚರಿಸುತ್ತವೆ. ಉತ್ತರಕನ್ನಡದ ಗೌಳಿಗರು ವಿಜಯದಶಮಿಗೆ 'ಶಿಲ್ಲೆಂಗಾನ' ಎನ್ನುವ ಆಚರಣೆ ಮಾಡುತ್ತಾರೆ. ಪಶುಪಾಲಕರಾದ ಇವರು ಇಡೀ ಹಬ್ಬದಲ್ಲಿ ಹಾಲು ಮೊಸರು ಬೆಣ್ಣೆಗಳ ಆಧರಿಸಿದ ಆಚರಣೆಗಳಿವೆ. ಮಡಿಯಲ್ಲಿ ಹಿಂಡಿದ ಹಾಲಿಗೆ ಹೆಪ್ಪು ಹಾಕಿ ದರ್ಬೆ ಹುಲ್ಲು ಸಿಕ್ಕಿಸಿದ ಮೊಸರಿನ ಗಡಿಗೆಯನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿರುತ್ತಾರೆ. ಈ ಮೊಸರಿನ ಗಡಿಗೆ ಹೊತ್ತುಕೊಂಡು ಮಹಿಳೆಯರೆಲ್ಲಾ ಹಬ್ಬದ ಸ್ಥಳಕ್ಕೆ ಸೇರಿ ಬನ್ನಿ ಮುಡಿಯುತ್ತಾರೆ. ಬಿಳಿಸೀರೆಯುಟ್ಟು ಮಹಿಳೆಯರು ನರ್ತಿಸುತ್ತಾರೆ. ಮಹಾರಾಷ್ಟ್ರ ಮೂಲದವರಾದ ಕಾರಣ ಈ ಹಬ್ಬದಲ್ಲಿ ಶಿವಾಜಿಯ ಖಡ್ಗ ಹಿಡಿದು ಪುರುಷರು ನರ್ತಿಸುತ್ತಾರೆ.

ಈ ಸಮಯವು ಮಳೆಗಾಲವಾದ್ದರಿಂದ ಅಲೆಮಾರಿ ಕುರುಬರು ಗುಡ್ಡಗಳಲ್ಲಿ ಬಿಡಾರ ಹೂಡಿ ಗುಡ್ಡಗಾಡು

ವಿಜಯನಗರದ ಅರಸರಿಗೆ ದಸರೆಯ ವೇದಿಕೆಯಾಗಿದ್ದ 'ಮಹಾನವಮಿ ದಿಬ್ಬ'



